# ಇರಾನಿನ ನೆನಪುಗಳು



ಮಿಲಾದ್ ಗೋಪುರದಿಂದ ಕಾಣುವ ತೆಹರಾನ್

**ಇರಾನ್– ಇಸ್ರೇಲ್ ಅಮೆರಿಕಗಳ ನಡುವೆ ನಡೆಯುತ್ತಿರುವ ಭೀಕರ ಯುದ್ಧ, ಜನರ ಸಾವು ನೋವುಗಳು ಭೂಮಿಯನ್ನು ರಣಾಂಗಣದಂತೆ ಚಿತ್ರಿಸಿವೆ. ಇಂಥ ಬಿಕ್ಕಟ್ಟಿನ ಹೊತ್ತಲ್ಲಿ, ಇರಾನ್ ಪ್ರವಾಸದಲ್ಲಿ ಕಂಡ ಜನಜೀವನದ ಮೆಲುಕು ಇಲ್ಲಿದೆ...**

■ ರಹಮತ್ ತರೀಕೆರೆ

ಇರಾನ್ –ಇಸ್ರೇಲ್ ಅಮೆರಿಕಗಳ ನಡುವೆ ಈಗ ನಡೆಯುತ್ತಿರುವ ಯುದ್ಧವು ಮಧ್ಯ ಏಶಿಯಾವನ್ನು ಭೀಕರವಾದ ರಣರಂಗವನ್ನಾಗಿ ಮಾಡಿದೆ. ಮಿಸ್ಸೈಲು ಬಾಂಬುಗಳಿಂದ ಎದ್ದಿರುವ ಬೆಂಕಿ ಹೊಗೆ, ಮನುಷ್ಯರ ಸಾವು ನೋವುಗಳು ಆಗಸವನ್ನು ಮುಟ್ಟಿವೆ. ಜನಬದುಕು ಹೈರಾಣವಾಗಿದೆ. ಈ ಬಿಕ್ಕಟ್ಟಿನ ಹೊತ್ತಲ್ಲಿ ಐದು ವರ್ಷಗಳ ಹಿಂದೆ ಮಾಡಿದ್ದ ಇರಾನ್ ಪ್ರವಾಸದ ನೆನಪುಗಳನ್ನು ಹಂಚಿಕೊಳ್ಳಬೇಕು ಅನಿಸುತ್ತಿದೆ.

ಇರಾನ್ ಮತ್ತು ಇರಾಕ್ ಜಗತ್ತಿನ ಪ್ರಾಚೀನ ನಾಗರಿಕತೆಯ ದೇಶಗಳೂ ಹೌದು. ಭಾರತದಂತಹ ಪ್ರಾಚೀನ ನಾಗರಿಕತೆಯ ದೇಶವೊಂದರಿಂದ ಮತ್ತೊಂದು ಪ್ರಾಚೀನ ನಾಗರಿಕತೆಯ ದೇಶಕ್ಕೆ ಹೋಗುತ್ತಿದ್ದೇನೆ ಎಂಬ ಭಾವದಿಂದ ನನ್ನ ಮನಸ್ಸು ಉದ್ದೀಪ್ತವಾಗಿತ್ತು. ಜತೆಗೆ ಅನೇಕ ಪ್ರಶ್ನೆಗಳು ಮನಸ್ಸಿನಲ್ಲಿ ತಳಮಳಿಸುತ್ತಿದ್ದವು: ಅಗ್ನಿಯಾರಾಧಕ ಝುರತುಷ್ಟ್ರ ಧರ್ಮದ ನೆಲೆಮನೆಯಾಗಿದ್ದ ಪರ್ಶಿಯಾವು ಇಸ್ಲಾಮನ್ನು ಸ್ವೀಕರಿಸಿದ ಬಳಿಕ, ತನ್ನ ಪೂರ್ವಪರಂಪರೆ ಉಳಿಸಿಕೊಂಡಿದೆಯೇ? ಇರಾನಿಗರು ಪ್ರಜಾಸತ್ತಾತ್ಮಕವಾಗಿ ಆಯ್ಕೆ ಮಾಡಿದ ಸರ್ಕಾರಗಳನ್ನ ಅಮೆರಿಕ ಇಂಗ್ಲೆಂಡು ಕಿತ್ತುಹಾಕಿದ ಬಳಿಕ, ಕಾಣಿಸಿಕೊಂಡ ಇಸ್ಲಾಮಿಕ್ ಕ್ರಾಂತಿಯ ಫಲವಾದ ಪರಮೋಚ್ಛ ಧಾರ್ಮಿಕ ನಾಯಕರ ಆಡಳಿತವು ದೇಶವನ್ನು ಹೇಗೆ ರೂಪಿಸಿದೆ? ಈ ಧಾರ್ಮಿಕ ನಾಯಕರ ಆಡಳಿತ ವಿರೋಧಿಸಿ ಅಲ್ಲಿ ನಾಗರಿಕ ಸ್ವಾತಂತ್ರ್ಯಕ್ಕಾಗಿ ನಡೆಯುತ್ತಿರುವ ಹೋರಾಟಗಳ ಸ್ವರೂಪವೇನು? (ನಾವು ಹೋಗುವಾಗ ಮಹಿಳೆಯರು ತಲೆಗವಸು ಧರಿಸುವುದನ್ನು ಸರ್ಕಾರ ಕಡ್ಡಾಯಗೊಳಿಸಿದ್ದನ್ನು ವಿರೋಧಿಸಿದ ಯುವತಿಯೊಬ್ಬಳನ್ನು ಸೆರೆಮನೆಯಲ್ಲಿ ಕೊಲ್ಲಲಾಗಿತ್ತು.) ಮಹಿಳೆಯರ ಮೇಲೆ ಧಾರ್ಮಿಕ ನಿರ್ಬಂಧಗಳಿದ್ದರೂ, ಅರಬ್ ರಾಷ್ಟ್ರಗಳಲ್ಲಿಲ್ಲದಷ್ಟು ದೊಡ್ಡ ಪ್ರಮಾಣದಲ್ಲಿ ಮಹಿಳೆಯರು ಇಲ್ಲಿ ಉನ್ನತ ಶಿಕ್ಷಣ ಪಡೆದಿರಲು ಕಾರಣವೇನು? ಅಮೆರಿಕವು ತೈಲವನ್ನು ವಶಪಡಿಸಿಕೊಳ್ಳಲು ಸೋತು ಹಾಕಿದ ದಿಗ್ಬಂಧನಕ್ಕೆ ಮಣಿಯದೆ, ಅದು ವಿಧಿಸಿದ ನಿರ್ಬಂಧಗಳಲ್ಲಿ ಈಸುತ್ತ ಇರಾನ್ ವಿಜ್ಞಾನ ತಂತ್ರಜ್ಞಾನದಲ್ಲಿ ಮಾಡಿರುವ ಸಾಧನೆ ರಹಸ್ಯವೇನು?

ಸಾಮಾನ್ಯವಾಗಿ ಭಾರತೀಯರ ವಿದೇಶಿ ಪ್ರವಾಸಗಳು, ಯೂರೋಪು ಅಥವಾ ಅಮೆರಿಕ ಕೇಂದ್ರಿತ. ಆಫ್ರಿಕಾ ಮತ್ತು ಮಧ್ಯ ಏಶಿಯಾಗಳ ಬಗ್ಗೆ ಹೀಗಾಗಿಯೇ ಪ್ರವಾಸ ಕಥನಗಳು ಕಡಿಮೆ. ಇನ್ನೊಂದು ಸಮಸ್ಯೆಯೆಂದರೆ, ಜಗತ್ತನ್ನು ಅಮೆರಿಕ ಮತ್ತು ಯೂರೋಪುಗಳು ತಮ್ಮ ಪೂರ್ವಗ್ರಹಗಳ ಮೂಲಕ ಒದಗಿಸುವ ಜ್ಞಾನದ ಮೂಲಕ ನಾವು ನೋಡುವುದು. ಆದರೆ ಪಶ್ಚಿಮ ಮತ್ತು ಮಧ್ಯ ಏಶಿಯಾದ ಇರಾಕ್ ಇರಾನ್ ಅಫಘಾನಿಸ್ತಾನ ಅರೇಬಿಯಾ ಟರ್ಕಿಗಳ ಜತೆ ಭಾರತಕ್ಕೆ ಪ್ರಾಚೀನ ಕಾಲದಿಂದ ಸಂಬಂಧಗಳಿವೆ. 1947ರ ತನಕವೂ ಆಧುನಿಕ ಇರಾನ್, ಭಾರತದ ನೆರೆದೇಶ. ಎರಡೂ ದೇಶಗಳ ನಡುವೆ ಭಾಷಿಕ ವ್ಯಾಪಾರಿ ಸಾಂಸ್ಕೃತಿಕ